ಮನೆಯಿತ್ತು. ಮನೆಗೆ ಸಮೀಪದ ನದಿ ತೊರೆಗಳಲ್ಲಿ ಸಮಯ ಕಳೆಯುವುದೆಂದರೆ ನನಗೆ ಭಾರೀ ಖುಷಿ. ಪ್ರಕೃತಿಯ ಒಡನಾಟವೇ ನನ್ನೊಳಗಿನ ಕಲೆಯನ್ನು ಹೊರತಂದಿದ್ದು. ನಗರ ಜೀವನಕ್ಕೆ ಬಂದ ನಂತರ ಪ್ರಕೃತಿಯಿಂದ ದೂರ ಸರಿದಂಥ ಭಾವ. ಈ ಭಾವನೆಗಳ ಅಭಿವ್ಯಕ್ತಿಗೆ ಕಲೆ ಮಾಧ್ಯಮವಾಯಿತು. ಹೀಗಾಗಿ ಪ್ರಕೃತಿ, ಕಾಡಿನ ಬಗ್ಗೆಯೇ ಹೆಚ್ಚು ಹೇಳಲು ಆರಂಭಿಸಿದೆ. ಪರಿಸರದ ಕುರಿತ ಕಾಳಜಿಯನ್ನೇ ನನ್ನ ಕಲಾಕೃತಿಗಳಲ್ಲಿ ಬಿಂಬಿಸಿದೆ. 'ಫಾರೆಸ್ಟ್' ಕಲಾ ಪ್ರದರ್ಶನ ಕೂಡ ಅಂಥ ಒಂದು ಪ್ರಯತ್ನ' ಎಂದು ತಮ್ಮ ಕಲಾಹಾದಿಯನ್ನು ತೆರೆದಿಡುತ್ತಾರೆ ಭವಾನಿ.

## ಪರಿಸರದ ಕುರಿತು ಜಾಗೃತಿ ಸಂವಾದ

ಕಲೆಯ ಮೂಲಕ ಪ್ರಕೃತಿಯನ್ನು ತೋರುವುದು ಮಾತ್ರವಲ್ಲ, ಅದರೆಡೆಗೆ ಕಾಳಜಿಯ ಅವಶ್ಯಕತೆಯನ್ನೂ ವ್ಯಕ್ತಪಡಿಸುತ್ತಾರೆ ಭವಾನಿ. ಕಾಲದ ಹೊಡೆತಕ್ಕೆ ಸಿಲುಕಿ ನಶಿಸುತ್ತಿರುವ ಪ್ರಕೃತಿಯನ್ನು, ಪ್ರಕೃತಿಯಿಂದ ಸಾಕಷ್ಟನ್ನು ಪಡೆದುಕೊಂಡು ಬದುಕುತ್ತಿರುವ ಮನುಷ್ಯರಿಗೆ ಇರಬೇಕಾದ ಕನಿಷ್ಠ ಕಾಳಜಿಯನ್ನು ತಮ್ಮ ಕಿರುಚಿತ್ರಗಳ ಮೂಲಕ ನಿರೂಪಿಸಿದ್ದಾರೆ. ಗ್ಯಾಲರಿ ಹಾಗೂ ಉತ್ಸವಗಳಲ್ಲಿ ತಮ್ಮ ಪರಿಸರ ಕಾಳಜಿಯನ್ನು ತೋರುವ ಜೊತೆಗೆ ಪರಿಸರದ ಕುರಿತು ಜಾಗೃತಿ ಮೂಡಿಸಲು ಸಾರ್ವಜನಿಕ ಸ್ಥಳಗಳಲ್ಲಿ ಸಂವಾದಗಳನ್ನು ಕೂಡ ಏರ್ಪಡಿಸಿದ್ದಾರೆ.

ಯಾವುದನ್ನೇ ಆಗಲಿ, ಪ್ರೀತಿಸಿದಾಗ ಅದರ ಬಗ್ಗೆ ಕಾಳಜಿ ವಹಿಸುತ್ತೇವೆ. ಪ್ರಕೃತಿ, ನದಿಗಳನ್ನು ಪ್ರೀತಿಸಲು ಶುರು ಮಾಡಿದರೆ ಅದರೆಡೆಗೂ ಕಾಳಜಿ ವಹಿಸುವುದನ್ನು ಆರಂಭಿಸುತ್ತೇವೆ. ಈ ಉದ್ದೇಶದೊಂದಿಗೆ ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಸಂವಾದಗಳನ್ನು ಏರ್ಪಡಿಸುತ್ತಾ ಬಂದಿದ್ದೇನೆ ಎಂದು ಮಾಹಿತಿ ನೀಡುತ್ತಾರೆ.

## ಕಾವೇರಿಯೊಂದಿಗಿನ ಪಯಣ

'ಕಲಾವಿದೆಯಾಗಿ ನನ್ನ ಸುತ್ತಲ ಜಗತ್ತಿನೊಂದಿಗೆ ಒಂದಾಗುವುದು, ಸ್ಪಂದಿಸುವುದು ತುಂಬಾ ಮುಖ್ಯ. ಹೀಗಾಗಿ ಕಲಾ ಮಾಧ್ಯಮದ ಮೂಲಕ ನನ್ನ ಉದ್ದೇಶವನ್ನು ಪಸರಿಸಲು ಆರಂಭಿಸಿದೆ. ಅದರ ಫಲವೇ 'ಜರ್ನಿ ವಿತ್ ರಿವರ್ ಕಾವೇರಿ' ದೀರ್ಘಾವಧಿ ಯೋಜನೆ' ಎನ್ನುತ್ತಾರೆ. 2009ರಿಂದಲೂ ಈ ಕಿರುಚಿತ್ರ ಯೋಜನೆಯಲ್ಲಿ ತೊಡಗಿಕೊಂಡಿರುವ ಭವಾನಿ ಅವರು, ಬೇರೆ ದೇಶಗಳಲ್ಲಿಯೂ ನದಿಗಳ ಕುರಿತು ಜಾಗೃತಿ ಮೂಡಿಸಿದ್ದಾರೆ.

'ಜರ್ನಿ ವಿತ್ ರಿವರ್ ಕಾವೇರಿ' – ಕಾವೇರಿ ನದಿಯ ಉಗಮ ಸ್ಥಳವಾದ ತಲಕಾವೇರಿಯಿಂದ ಹಿಡಿದು ತಮಿಳುನಾಡಿನ ಪೂಂಪುಹಾರದವರೆಗಿನ ಪಯಣ. ಈ ಯೋಜನೆಯಲ್ಲಿ ನದಿಯೊಂದಿಗಿನ ನನ್ನ ಬಾಂಧವ್ಯ ಇನ್ನಷ್ಟು ಗಟ್ಟಿಗೊಂಡಿತು. ಪಯಣದಲ್ಲಿ ಹಲವು ಅನುಭವಗಳು ಒಟ್ಟುಗೂಡಿದವು. ಕೊಡಗಿನವಳೇ ಆದ್ದರಿಂದ ಹೆಚ್ಚು ಭಾವನಾತ್ಮಕವಾಗಿ ತೊಡಗಿಕೊಂಡಿದ್ದೆ. ಈ ಅವಧಿಯಲ್ಲಿ ಪರಿಸರ ಸಂಬಂಧವಾಗಿ ಸಾಕಷ್ಟು ಪ್ರಶ್ನೆಗಳು ಹುಟ್ಟಿಕೊಂಡವು. ನದಿ ನೀರಿನ ಹಂಚಿಕೆ ಹಾಗೂ ಬಳಕೆ, ಯಾರಿಗೆ ಹೆಚ್ಚು ನೀರು ಸಿಗುತ್ತಿದೆ? ಯಾರಿಗೆ ಹೆಚ್ಚು ಉಪಯೋಗವಾಗುತ್ತಿದೆ? ಯಾವುದಕ್ಕೆ ಎಷ್ಟೆಷ್ಟು ನೀರು ಅಗತ್ಯ? ನೀರು ಎಲ್ಲಿ ಪೋಲಾಗುತ್ತಿದೆ? ಇಂಥ ಹಲವು ಪ್ರಶ್ನೆಗಳಿಗೂ ಉತ್ತರ ಸಿಗಲು ಆರಂಭಿಸಿತು. ಕಾವೇರಿಯ ಸಹ ಪ್ರಯಾಣಿಕಳಂತೆ ವಿಡಿಯೊದಲ್ಲಿ ಕಥೆ ನಿರೂಪಿಸಿದೆ. ಕಿರುಚಿತ್ರ ಪ್ರದರ್ಶನ ನೀಡಿದೆ' ಎಂದು ವಿವರಿಸುತ್ತಾರೆ.

ಭಾರತದ ಹಲವು ಕಡೆಗಳಲ್ಲಷ್ಟೇ ಅಲ್ಲದೆ, ಜರ್ಮನಿ, ಶ್ರೀಲಂಕಾ, ವಿಯೆಟ್ನಾಂ, ನ್ಯೂಜಿಲೆಂಡ್‌ಗಳಲ್ಲಿ ಕೂಡ ಚಿತ್ರಕಲಾ ಪ್ರದರ್ಶನ ನೀಡಿದ್ದಾರೆ. ಮುಂಬೈನಲ್ಲಿ 'ಫ್ರಾಗ್ಮೆಂಟೆಡ್ ಮೆಮೊರೀಸ್', ಹೈದರಾಬಾದ್‌ನ ಸ್ಟೇಟ್ ಗ್ಯಾಲರಿ ಆಫ್ ಆರ್ಟ್ ಹಾಗೂ ಕೌನಾಸ್‌ನ ಬಾಲ್ಟಾ ಆರ್ಟ್ ಗ್ಯಾಲರಿಯಲ್ಲಿ ಸೋಲೊ ಶೋ ಏರ್ಪಡಿಸಿದ್ದರು. ಮೈಸೂರಿನ ರಂಗಾಯಣ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ 'ಜರ್ನಿ ವಿತ್ ರಿವರ್ ಕಾವೇರಿ', ಚೆನ್ನೈನ ದಕ್ಷಿಣ್ ಚಿತ್ರಾದಲ್ಲಿ 'ಫಾರ್ಮ್ಸ್ ರಿವರ್ ಅರ್ಥ್', 2012ರಲ್ಲಿ 'ಜರ್ನಿ ವಿತ್ ರಿವರ್ ಕಾವೇರಿ ಪಾರ್ಟ್ 2' ಕೂಡ ಹೊರತಂದರು. 'ದಿ ಸೆಲ್ಫ್ ಇನ್ ನೇಚರ್, ವಿಸ್ಪರ್ಸ್ ಆಫ್ ದಿ ವುಡ್ಸ್' ಅನ್ನು ವಿಯೆಟ್ನಾಂನಲ್ಲಿ ಪ್ರದರ್ಶಿಸಿದ್ದರು. 'ಟೆಕ್ಸ್‌ಚರ್ಸ್ ಫ್ರಂ ಲೈಫ್ ಅಂಡ್ ನೇಚರ್' ಕಲಾ ಪ್ರದರ್ಶನವನ್ನು ನ್ಯೂಜಿಲೆಂಡ್‌ನಲ್ಲಿ ನೀಡಿದ್ದರು.

ಪ್ರತಿಕ್ರಿಯಿಸಿ: feedback@sudha.co.in

### ಕಾಡಿನ ಕಥೆಯ 'ಫಾರೆಸ್ಟ್'

ಭವಾನಿ ಅವರ 'ಫಾರೆಸ್ಟ್' ವರ್ಣಚಿತ್ರ ಕಲಾ ಪ್ರದರ್ಶನವು ಬೆಂಗಳೂರಿನ 'ಅಂಬರ'ದಲ್ಲಿ ನಡೆಯುತ್ತಿದೆ. ಕಾಡಿನ ಚಿತ್ರಣವನ್ನು ಬಣ್ಣಗಳಲ್ಲಿ ತೆರೆದಿಟ್ಟಿರುವ ಭವಾನಿ ಅವರ ಈ ಚಿತ್ರ ಪ್ರದರ್ಶನ ಆಗಸ್ಟ್ 1ರಿಂದ ಆರಂಭವಾಗಿದ್ದು, ಆಗಸ್ಟ್ 31ರವರೆಗೂ ಮುಂದುವರೆಯುತ್ತದೆ (ಭಾನುವಾರ ಪ್ರದರ್ಶನವಿರುವುದಿಲ್ಲ).

**ವರ್ಣ ಚಿತ್ರ ಪ್ರದರ್ಶನದ ಸ್ಥಳ:** ಅಂಬರ – ದಿ ಅಪ್‌ಸ್ಟೇರ್ಸ್ ಆರ್ಟ್ ಸ್ಪೇಸ್, ನಂ. 22, ಅಣ್ಣಸ್ವಾಮಿ ಮುದಲಿಯಾರ್ ರಸ್ತೆ, ಹಲಸೂರು ಕೆರೆ ಸಮೀಪ.



